ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಶಿವಮೊಗ್ಗ (ಪೀಠಾಸೀನ, ಸಾಗರ)
ಎಸ್.ಸಿ ಃ **10011/2021**

ಪಿರ್ಯಾದುದಾರರು ವಿರುದ್ಧ ಆರೋಪಿತರು
ಸಾಗರ ಗ್ರಾಮಾಂತರ ಪೊಲೀಸ್ ಠಾಣೆ ಕೇಶವಮೂರ್ತಿ ಮತ್ತು ಇತರರು.

ಶಿವಮೊಗ್ಗದ ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಶ್ರೀ. ಮಹಂತಪ್ಪ ಎ.ಡಿ. ಆದ ನಾನು ನಿಮ್ಮ ಅಂದರೆ

**1)** ಕೇಶವಮೂರ್ತಿ ಬಿನ್ ಭದ್ರೆಗೌಡ **, 46** ವರ್ಷ **,**
ವಾಸಃ ಹೆಬ್ಬರಗಿ ಗ್ರಾಮ, ಸಾಗರ ತಾಲ್ಲೂಕು.
2) ಶ್ರೀಮತಿ ಮಮತಾ ಕೋಂ ಕೇಶವಮೂರ್ತಿ , 40 ವರ್ಷ,
ವಾಸಃ ಹೆಬ್ಬರಗಿ ಗ್ರಾಮ, ಸಾಗರ ತಾಲ್ಲೂಕು.
**3)** ರವೀಂದ್ರ ಬಿನ್ ವೀರಪ್ಪಗೌಡ **, 26** ವರ್ಷ **,**
ವಾಸಃ ಮುಂಬರು ಗ್ರಾಮ, ಹೊಸನಗರ ತಾಲ್ಲೂಕು.

ಮೇಲೆ ಈ ಕೆಳಕಂಡಂತೆ ಆರೋಪ ಹೊರಿಸುತ್ತೇನೆ.

## ದೋಷಾರೋಪಣೆ

ಮೊದಲನೆಯದಾಗಿ, ದಿನಾಂಕಃ 13-03-2016 ರಂದು ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ ಸಾಗರ ತಾಲ್ಲೂಕು, ಹೆಬ್ಬರಗಿ ಗ್ರಾಮದ ಸಾಕ್ಷಿ 1 ರವರಿಗೆ ಸೇರಿದ ಅಡಿಕೆ ತೋಟದಲ್ಲಿ ಸಾಕ್ಷಿ 1 ರವರು ಕೆಲಸ ಮಾಡುತ್ತಿದ್ದಾಗ **1** ರಿಂದ **3** ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಏರ್ ರೈಫಲ್ ನೊಂದಿಗೆ ಸಾಕ್ಷಿ **1** ರವರಿಗೆ ಸೇರಿದ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ **447** ಸಹವಾಚಕ **34** ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ **1** ರಿಂದ **3** ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಚಾಸಾಃ **1** ರವರಿಗೆ ಸೇರಿದ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಜಮೀನು ವಿವಾದದ ಹಿನ್ನೆಲೆಯಲ್ಲಿ ಸಾಕ್ಷಿ **1** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ **504** ಸಹವಾಚಕ **34** ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ **1** ರಿಂದ **3** ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಚಾಸಾಃ **1** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹಲ್ಲೆ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ **323** ಸಹವಾಚಕ **34** ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಚಾಸಾಃ 1 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಏರ್ ರೈಫಲ್ ನಿಂದ ಗುಂಡು ಹಾರಿಸಿ ಸಾಯಿಸಲು 1 ನೇ ಆರೋಪಿ ನೀನು ಸಾಕ್ಷಿ 1 ರವರ ಕಡೆಗೆ ಗುರಿ ಹಿಡಿಯುತ್ತಿರುವಾಗ 2 ನೇ ಆರೋಪಿ ನೀನು 1 ನೇ ಆರೋಪಿ ಕೈಯಿಂದ ಏರ್ ರೈಫಲ್ ಅನ್ನು ಕಸಿದುಕೊಂಡು ಸಾಕ್ಷಿ 1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಸಾಕ್ಷಿ 1 ರವರ ಮೇಲೆ ಗುಂಡು ಹಾರಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 307 ಸಹವಾಚಕ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಚಾಸಾಃ 1 ರವರಿಗೆ ಏರ್ ರೈಫಲ್ ನಿಂದ ಗುಂಡು ಹಾರಿಸಿದ್ದು, ಗುಂಡು ಸಾಕ್ಷಿ 1 ರವರ ಎಡ ತೊಡೆಗೆ ಹೊಕ್ಕು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 324 ಸಹವಾಚಕ 34 ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಆದ್ದರಿಂದ ನಿಮ್ಮನ್ನ ವಿಚಾರಣೆಗೊಳಪಡಿಸಿ ಮುಂದಿನ ಪ್ರಕರಣ ನಡೆಸಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

ದಿನಾಂಕಃ 6 ನೇ ಜನವರಿ ಮಾಹೆ 2022 ನೇ ಇಸವಿ.

(ಮಹಂತಪ್ಪ ಎ.ಡಿ)
ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಶಿವಮೊಗ್ಗ, ಪೀಠಾಸೀನ (ಸಾಗರ).

ಆರೋಪಿತರ ಸಹಿಃ